## ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ಶ್ರೀ ದೊಡ್ಡಸಿದ್ದಯ್ಯ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ ಮತ್ತು ಶ್ರೀ ಪ್ರಮೋದ್ ಕುಮಾರ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಾಮರಾಜನಗರ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖೆ ವಿಚಾರಣೆ- ಅಂತಿಮ ಆದೇಶ:-

*ಓದಲಾಗಿದೆ:*

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ ಇವರ ಪತ್ರ ಸಂಖ್ಯೆ:ಜಿಪಂಚಾ:ಆಡಳಿತ(1):65:2016-17/999, ದಿ:13.10.2016.
2. ಸರ್ಕಾರದ ಆರೋಪ ಪಟ್ಟಿ ಸಂಖ್ಯೆ: ಗ್ರಾಅಪ 267 ಜಿಪಅ 2017 ದಿ:15.11.2016.
3. ಅಪಾದಿತರ ವಿವರಣೆ ದಿನಾಂಕ:
   1. ಶ್ರೀ ಪ್ರಮೋದ್ ಕುಮಾರ್, ದಿನಾಂಕ:5.12.2016.
   2. ದೊಡ್ಡಸಿದ್ದಯ್ಯ, ಹಿಂದಿನ ಕಾ.ಇಂ ದಿ:7.12.2016.

***ಪ್ರಸ್ತಾವನೆ:-***

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ ಇವರು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:13.10.2016 ರ ಪತ್ರದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ ಇಲ್ಲಿನ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ದೊಡ್ಡಸಿದ್ದಯ್ಯ ಇವರು ಜಿಲ್ಲಾ ಪಂಚಾಯತ್ ಕಛೇರಿಯ ಪೂರ್ವಾನುಮತಿ ಪಡೆಯದೇ ಕರ್ತವ್ಯದಿಂದ ಬಿಡುಗಡೆ ಗೊಂಡಿರುತ್ತಾರೆಂದು ಅವರ ಹುದ್ದೆಯ ಪ್ರಭಾರವನ್ನು ಶ್ರೀ ಪ್ರಮೋದಕುಮಾರ್, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ ಇವರಿಗೆ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸಿ ಉದ್ದಟತನ ತೋರಿಸಿರುತ್ತಾರೆಂದು, ಶ್ರೀ ಪ್ರಮೋದ ಕುಮಾರ್. ಇವರು ಸಹ ಜಿಲ್ಲಾ ಪಂಚಾಯತ್ ಅನುಮತಿ ಇಲ್ಲದೇ ಪ್ರಭಾರ ಸ್ವೀಕರಿಸಿರುವುದು ಅವರ ಕರ್ತವ್ಯ ಲೋಪವಾಗಿರುತ್ತದೆಯೆಂದು, ಕೆರೆ ಸಂಜೀವಿನಿ ಯೋಜನೆ ಜಾರಿಯಲ್ಲಿದ್ದು, ಇದು ಸರ್ಕಾರದ ಅಧ್ಯತೆ ಕಾರ್ಯಕ್ರಮವಾಗಿದ್ದು, ಇದನ್ನು ಸಹ ಪೂರ್ಣ ಗೊಳಿಸಿರುವುದಿಲ್ಲವೆಂದು, ಆದ್ದರಿಂದ ಶ್ರೀ ದೊಡ್ಡಸಿದ್ದಯ್ಯ, ಕಾ.ಇಂ ಮತ್ತು ಶ್ರೀ ಪ್ರಮೋದ ಕುಮಾರ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ತಿಳಿಸಿರುವ ಇಬ್ಬರ ಆರೋಪಿತರಗಳು ವಿರುದ್ದದ ಆರೋಪಗಳ ಸ್ವರೂಪವನ್ನು ಗಮನಿಸಿ, ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 12 ರಡಿ ನಡೆಸಲು ಉದ್ದೇಶಿಸಿ, ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:15.11.2016 ರಂದು ಕಾರಣ ಕೇಳುವ ನೋಟಿಸ್‌ನೊಂದಿಗೆ ಆರೋಪ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (3) ರಲ್ಲಿ ಇಬ್ಬರು ಅಧಿಕಾರಿಗಳು ಪ್ರಕರಣದ ವಾಸ್ತಾವಂಶಗಳೊಂದಿಗೆ ವಿವರಣೆ ಸಲ್ಲಿಸಿ, ಅವರಿಂದ ಯಾವುದೇ ತಪ್ಪುಗಳು ಆಗಿರುವುದಿಲ್ಲವೆಂದು, ಪರಿಸ್ಥಿತಿಗೆ ಅನುಗುಣವಾಗಿ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯ ಪ್ರಭಾರವನ್ನು ಹಸ್ತಾಂತರ ಪಡೆಯಲಾಗಿದ್ದು, ಇದು ಕರ್ತವ್ಯ ಲೋಪವೆಂದು ಕಂಡು ಬಂದಲ್ಲಿ ಕ್ಷಮೆ ನೀಡುವಂತೆ ಇನ್ನು ಮುಂದೆ ಈ ರೀತಿಯ ಲೋಪಗಳು ಉಂಟಾಗದಂತೆ ಕಾರ್ಯನಿರ್ವಹಿಸುವುದಾಗಿ ಮನವಿ ಮಾಡಿರುತ್ತಾರೆ.

ಸರ್ಕಾರವು ಇಬ್ಬರು ಅಧಿಕಾರಿಗಳ ವಿರುದ್ದದ ಆರೋಪಗಳು ಅದಕ್ಕೆ ಪ್ರತಿಯಾಗಿ ಅವರು ನೀಡಿರುವ ವಿವರಣೆಯನ್ನು ದಾಖಲೆಗಳೊಂದಿಗೆ ಪರಿಶೀಲಿಸಿರುತ್ತದೆ. ಶ್ರೀ ದೊಡ್ಡಸಿದ್ದಯ್ಯ, ಇವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾನಗರ ಇಲ್ಲಿನ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ

ಕಾರ್ಯನಿರ್ವಹಿಸುತ್ತಿದ್ದ ಅವರಿಗೆ ಲೋಕೋಪಯೋಗಿ ಇಲಾಖೆಯು ದಿನಾಂಕ:9.9.2015 ರ ಅಧಿಸೂಚನೆಯಲ್ಲಿ ಅಧೀಕ್ಷಕ ಇಂಜಿನಿಯರ್ ಹುದ್ದೆಗೆ ನಿಯಮ 32 ರಡಿ ಬಡ್ತಿ ನೀಡಿರುತ್ತದೆ. ನಂತರ ದಿನಾಂಕ:25.6.2016 ರ ಅಧಿಸೂಚನೆಯಲ್ಲಿ ಲೋಕೋಪಯೋಗಿ ವೃತ್ತ, ಹಾಸನ ಇಲ್ಲಿನ ಅಧೀಕ್ಷಕ ಇಂಜಿನಿಯರ್ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿರುತ್ತದೆ. ಶ್ರೀಯುತರು ದಿನಾಂಕ:27.6.2016 ರಂದು ಪಂ.ರಾ.ಇಂ ವಿಭಾಗ, ಚಾಮರಾಜನಗರ ಇಲ್ಲಿನ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯ ಪ್ರಭಾರವನ್ನು ಶ್ರೀ ಪ್ರಮೋದ್ ಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಾಮರಾಜನಗರ ಇವರಿಗೆ ಹಸ್ತಾಂತರಿಸಿರುತ್ತಾರೆ. ಸದರಿ ಪ್ರಭಾರವನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಸಕ್ಷಮ ಮೇಲಾಧಿಕಾರಿಗಳಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ ಇವರ ಪೂರ್ವಾನುಮತಿ ಪಡೆದಿರುವುದಿಲ್ಲ. ಸದರಿಯವರು ಸ್ಥಳ ನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ತುರ್ತಾಗಿ ಕರ್ತವ್ಯಕ್ಕೆ ಹಾಜರಾಗುವ ಉದ್ದೇಶದಿಂದ ಬಿಡುಗೊಂಡಿರುವ ಸಾಧ್ಯತೆಗಳು ಇದ್ದರೂ ಸಹ ವಾಸ್ತಾವಾಂಶಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತರದೇ ಸ್ವ ಇಚ್ಛೆಯಿಂದ ಬಿಡುಗಡೆಗೊಂಡು ಕರ್ತವ್ಯ ಲೋಪ ಎಸಗಿರುವ ಆರೋಪವು ಅವರ ವಿರುದ್ಧ ಸಾಭೀತಾಗಿರುತ್ತದೆ.

ಶ್ರೀ ಪ್ರಮೋದ ಕುಮಾರ್ ಇವರು ಮೇಲಾಧಿಕಾರಿಗಳಾದ ದೊಡ್ಡಸಿದ್ದಯ್ಯ ಇವರ ಸೂಚನೆಯಂತೆ ಪ್ರಭಾರ ಪಡೆದಿದ್ದು, ಅವರಿಂದ ಪೂರ್ಣ ಪ್ರಮಾಣದ ಕರ್ತವ್ಯಲೋಪಗಳು ಉಂಟಾಗಿರುವುದನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಅದರೆ, ಇವರು ಕಾರ್ಯಪಾಲಕ ಇಂಜಿನಿಯರ್ ಹುದ್ದೆಯ ಪ್ರಭಾರವನ್ನು ಪಡೆಯುವ ಸಂದರ್ಭದಲ್ಲಿ ಸಕ್ಷಮ ಪ್ರಾಧಿಕಾರದ ಸ್ಪಷ್ಟ ಸೂಚನೆ ಇರುವ ಬಗ್ಗೆ ಖಚಿತ ಪಡಿಸಿಕೊಳ್ಳದೆ ಪ್ರಭಾರವನ್ನು ಪಡೆದಿರುವುದನ್ನು ಸಹ ಕರ್ತವ್ಯ ಲೋಪವೆಂದೆ ಪರಿಗಣಿಸಬೇಕಾಗುತ್ತದೆ. ಪ್ರಸ್ತುಕ ಪ್ರಕರಣದಲ್ಲಿ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ. ಆದ್ದಾಗ್ಯೂ ಸಾಭೀತಾಗಿರುವ ಆರೋಪಗಳ ಗಂಭೀರತೆಗೆ ಅನುಗುಣವಾಗಿ ಅಪಾದಿತರಿಗೆ ಸೂಕ್ತ ದಂಡನೆ ಹಾಗೂ ಎಚ್ಚರಿಕೆ ನೀಡುವುದು ಅಗತ್ಯವೆಂದು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ:-

**ಆದೇಶ ಸಂಖ್ಯೆ:ಗ್ರಾಅಪ 267 ಜಿಪಅ 16, ಬೆಂಗಳೂರು, ದಿನಾಂಕ:21.4.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು ಶ್ರೀ ದೊಡ್ಡಸಿದ್ದಯ್ಯ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಇವರು ಸಕ್ಷಮ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಕರ್ತವ್ಯದಿಂದ ಬಿಡುಗಡೆಗೊಂಡಿರುವ ಆರೋಪವು ಸಾಬೀತಾಗಿರುವುದರಿಂದ ಅವರಿಗೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 8(ii) ರ ಅನುಸಾರ ವಾಗ್ದಂಡನೆ ವಿಧಿಸಿ, ಆದೇಶಿಸಿದೆ.

ಶ್ರೀ ಪ್ರಮೋದ್ ಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಕಾರ್ಯಪಾಲಕ ಇಂಜಿನಿಯರ್ ಹುದ್ದೆಯ ಪ್ರಭಾರವನ್ನು ಪಡೆಯುವ ಸಂದರ್ಭದಲ್ಲಿ ಸಕ್ಷಮ ಪ್ರಾಧಿಕಾರದ ಸ್ಪಷ್ಟ ಸೂಚನೆ ಇರುವ ಬಗ್ಗೆ ಖಚಿತ ಪಡಿಸಿಕೊಳ್ಳದೆ ಪ್ರಭಾರವನ್ನು ಪಡೆದಿರುವುದರಿಂದ ಸದರಿಯವರಿಗೆ **ಆಡಳಿತಾತ್ಮಕ ಎಚ್ಚರಿಕೆಯನ್ನು** ನೀಡಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21/04/201

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. **ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್)** ಕರ್ನಾಟಕ, ಬೆಂಗಳೂರು.
2. **ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.**

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು
5. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
6. ಶ್ರೀ ದೊಡ್ಡಸಿದ್ದಯ್ಯ, ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವೃತ್ತ, ಹಾಸನ
7. ಶ್ರೀ ಪ್ರಮೋದ್ ಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಾಮರಾಜನಗರ.
8. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
9. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) /ಜಂಟಿ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
10. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.